# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಪಂಚಾಯತಿಗಳ ಸಬಲೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹ ಯೋಜನೆ (PEAIS) ಅಡಿಯಲ್ಲಿ ರಾಜ್ಯದ ಪಂಚಾಯತಿ ಸಂಸ್ಥೆಗಳಿಗೆ ಬಿಡುಗಡೆಗೊಳಿಸಿರುವ ನಗದು ಬಹುಮಾನದ ವಿನಿಯೋಗಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳು

ಓದಲಾಗಿದೆ :

(1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 09 ಜಿಪಸ 2011, ದಿನಾಂಕ:28.03.2013

(2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 326 ಜಿಪಸ 2012, ದಿನಾಂಕ:19.04.2013

**ಪ್ರಸ್ತಾವನೆ:**

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಉತ್ತಮ ಸಾಧನೆ ಮಾಡಿರುವ ದೇಶದ ವಿವಿಧ ರಾಜ್ಯ ಸರ್ಕಾರಗಳಿಗೆ ಹಾಗು ವೈಯಕ್ತಿಕ ಸಾಧನೆಗಳಿಗಾಗಿ ಮೂರು ಹಂತದ ಪಂಚಾಯತಿ ಸಂಸ್ಥೆಗಳಿಗೆ ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು "ಪಂಚಾಯತಿಗಳ ಸಬಲೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹ ಯೋಜನೆ (PEAIS)" ಅಡಿಯಲ್ಲಿ ಪ್ರಶಸ್ತಿಗಳನ್ನು ಘೋಷಿಸಿ ನಗದು ಬಹುಮಾನವನ್ನು ನೀಡಿ ಪುರಸ್ಕರಿಸುತ್ತಿದೆ. ಅದರಂತೆ ಪಂಚಾಯತ್ ರಾಜ್ ಮಂತ್ರಾಲಯವು 2010-11, 2011-12 ಮತ್ತು 2012-13ನೇ ಸಾಲುಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿನ ಕರ್ನಾಟಕ ರಾಜ್ಯದ ಸಾಧನೆಯನ್ನು ಪರಿಗಣನೆಗೆ ತೆಗೆದುಕೊಂಡು ರಾಜ್ಯ ಸರ್ಕಾರಕ್ಕೆ ಹಾಗು ವೈಯಕ್ತಿಕ ಸಾಧನೆಗಳಿಗಾಗಿ ಹಲವು ಪಂಚಾಯತಿ ಸಂಸ್ಥೆಗಳಿಗೆ "ಪಂಚಾಯತಿಗಳ ಸಬಲೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹ ಯೋಜನೆ (PEAIS)" ಅಡಿಯಲ್ಲಿ ಪ್ರಶಸ್ತಿಗಳನ್ನು ಘೋಷಿಸಿ ನಗದು ಬಹುಮಾನವನ್ನು ನೀಡಿದೆ.

ಕರ್ನಾಟಕ ರಾಜ್ಯಕ್ಕೆ PEAIS ಅಡಿಯಲ್ಲಿ 2010-11, 2011-12 ಮತ್ತು 2012-13ನೇ ಸಾಲುಗಳಲ್ಲಿ ರಾಜ್ಯ ಪ್ರಶಸ್ತಿ ಘೋಷಣೆಯಾಗಿ ಕ್ರಮವಾಗಿ ರೂ.2.00 ಕೋಟಿಗಳು, ರೂ.2.00 ಕೋಟಿಗಳು ಮತ್ತು ರೂ.2.50 ಕೋಟಿಗಳ ನಗದು ಬಹುಮಾನ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾಗಿರುತ್ತದೆ. ಅಂತೆಯೇ 2012-13ನೇ ಸಾಲಿನಲ್ಲಿ ರಾಜ್ಯದ ಏಳು ಪಂಚಾಯತಿ ಸಂಸ್ಥೆಗಳಿಗೆ ವೈಯಕ್ತಿಕ ಸಾಧನೆಗಾಗಿ ಪ್ರಶಸ್ತಿ ಘೋಷಣೆಯಾಗಿ ( 1 ಜಿಲ್ಲಾ ಪಂಚಾಯತಿ + 2 ತಾಲ್ಲೂಕು ಪಂಚಾಯತಿಗಳು + 4 ಗ್ರಾಮ ಪಂಚಾಯತಿಗಳು) ರೂ.1.36 ಕೋಟಿಗಳ ನಗದು ಬಹುಮಾನ ಬಿಡುಗಡೆಯಾಗಿರುತ್ತದೆ.

PEAIS ಅಡಿಯಲ್ಲಿ ರಾಜ್ಯ ಸರ್ಕಾರ ಮತ್ತು ಪಂಚಾಯತಿ ಸಂಸ್ಥೆಗಳಿಗಾಗಿ ಪಂಚಾಯತ್ ರಾಜ್ ಮಂತ್ರಾಲಯದಿಂದ ಬಿಡುಗಡೆಯಾದ ನಗದು ಬಹುಮಾನವನ್ನು ರಾಜ್ಯದ ಹಲವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಓದಲಾದ ಸರ್ಕಾರದ ಆದೇಶಗಳ ಮೂಲಕ ಬಿಡುಗಡೆಗೊಳಿಸಲಾಗಿದೆ. ಓದಲಾದ ಆದೇಶಗಳಲ್ಲಿ PEAIS ನಗದು ಬಹುಮಾನದ ವಿನಿಯೋಗಕ್ಕೆ ಸಂಬಂಧಿಸಿದಂತೆ ಯಾವುದೇ ಸ್ಪಷ್ಟನೆ / ವಿವರಣೆಗಳನ್ನು ನೀಡಿರುವುದಿಲ್ಲ ಬದಲಾಗಿ

ನಗದು ಬಹುಮಾನದ ವಿನಿಯೋಗಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು ಎಂದು ತಿಳಿಸಲಾಗಿದೆ. ಅದರಂತೆ PEAIS ನಗದು ಬಹುಮಾನದ ವಿನಿಯೋಗಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸುವ ಅಗತ್ಯವಿದ್ದು ಅದಕ್ಕಾಗಿ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 45 ತಾಪಸ 2013, ಬೆಂಗಳೂರು, ದಿನಾಂಕ:09.07.2013**

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು "ಪಂಚಾಯತಿಗಳ ಸಬಲೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹ ಯೋಜನೆ (PEAIS)" ಅಡಿಯಲ್ಲಿ ಪ್ರಶಸ್ತಿಗಳನ್ನು ಘೋಷಿಸಿ ಬಿಡುಗಡೆಗೊಳಿಸಿರುವ ನಗದು ಬಹುಮಾನದ ವಿನಿಯೋಗಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ಮಾರ್ಗಸೂಚಿಗಳನ್ನು ಹೊರಡಿಸಿ ಆದೇಶಿಸಲಾಗಿದೆ. ಈ ಮಾರ್ಗಸೂಚಿಗಳ ಅನುಸಾರ ಮಾತ್ರವೇ ನಗದು ಬಹುಮಾನವನ್ನು ವಿನಿಯೋಗಿಸಿ ಕ್ರಮವಹಿಸತಕ್ಕದ್ದು.

1. ಕಾಮಗಾರಿಗಳ ಅನುಷ್ಠಾನವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 1999/2000 ಹಾಗು ಇದಕ್ಕೆ ಕಾಲಕಾಲಕ್ಕೆ ಮಾಡಲಾದ ಎಲ್ಲಾ ತಿದ್ದುಪಡಿಗಳ ಅನುಸಾರ ನೆರವೇರಿಸತಕ್ಕದ್ದು.
2. ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸಿರುವ ಮೊತ್ತದಲ್ಲಿ ಈ ಪಂಚಾಯತ್ ಸಂಸ್ಥೆಗಳು ಶಾಶ್ವತ ಆಸ್ತಿ ಸೃಜನೆಯಾಗುವಂತಹ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಬಹುದು. ಈ ಆಸ್ತಿಗಳ ಸೃಜನೆಯಿಂದಾಗಿ ಪಂಚಾಯತ್ ಸಂಸ್ಥೆಗಳಿಗೆ ನಿಗದಿತ ಆದಾಯ ಬರುವಂತ ಕಾಮಗಾರಿಗಳಿಗೆ ಹೆಚ್ಚು ಆದ್ಯತೆ ನೀಡಬಹುದು.
3. ಕಾಮಗಾರಿಗಳ ಅನುಷ್ಠಾನದಲ್ಲಿ ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳುವುದು.
4. ನಗದು ಬಹುಮಾನವನ್ನು ಬಾಕಿ ಉಳಿಸದೇ ಬಿಡುಗಡೆಗೊಳಿಸಿದ ಪೂರ್ಣ ಮೊತ್ತಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಷ್ಠಾನಗೊಳಿಸತಕ್ಕದ್ದು. ಈ ಕ್ರಿಯಾ ಯೋಜನೆಯು ಆಯಾ ಪಂಚಾಯತಿ ಸಂಸ್ಥೆಯ ಆಯವ್ಯಯ ಮತ್ತು ಅಭಿವೃದ್ಧಿ ಯೋಜನೆಯ ಭಾಗವಾಗಿರಬೇಕು.
5. ಕ್ರಿಯಾ ಯೋಜನೆಯನ್ನು ತಯಾರಿಸುವಾಗ ಗ್ರಾಮೀಣ ಪ್ರದೇಶದ ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಅನುಕೂಲವಾಗುವಂತಹ ಕ್ಷೇತ್ರಗಳಾದ ಕುಡಿಯುವ ನೀರು, ನೈರ್ಮಲ್ಯ, ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಪೌಷ್ಟಿಕಾಂಶ ಸಂಬಂಧಿ ಚಟುವಟಿಕೆಗಳನ್ನು ಸೇರ್ಪಡೆಗೊಳಿಸಿಕೊಳ್ಳಬಹುದು.
6. ನಗದು ಬಹುಮಾನದ ಶೇಖಡ 25ರಷ್ಟನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವರ್ಗಗಳ ಕಲ್ಯಾಣಕ್ಕೆ ವಿನಿಯೋಗಿಸತಕ್ಕದ್ದು. ಹಾಗೆಯೇ ಶೇಖಡ 3ರಷ್ಟನ್ನು ವಿಕಲಚೇತನರಿಗೆ ವಿನಿಯೋಗಿಸುವುದು.
7. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ (3) ಹಾಗು (3)(ಎ) ಪ್ರಕಾರ ವಾರ್ಡ್ ಸಭೆ ಹಾಗು ಗ್ರಾಮ ಸಭೆ ಶಿಫಾರಸ್ಸುಗಳನ್ನು ಆದ್ಯತೆಗನುಸಾರ ಗ್ರಾಮ ಪಂಚಾಯತಿ ಸಭೆಯಲ್ಲಿ/ ತಾಲ್ಲೂಕು ಪಂಚಾಯತಿ ಸಭೆಯಲ್ಲಿ / ಜಿಲ್ಲಾ ಪಂಚಾಯತಿ ಸಭೆಯಲ್ಲಿ ಅಭಿವೃದ್ಧಿ ಯೋಜನೆಯ ಅನುಮೋದನೆ ಪಡೆಯುವುದನ್ನು ಕಡ್ಡಾಯಗೊಳಿಸಿದೆ.
8. ಪ್ರಗತಿ ವರದಿಯನ್ನು ಹಾಗು ಹಣ ಬಳಕೆ ಪತ್ರವನ್ನು ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದು.

9. ನಗದು ಬಹುಮಾನದಿಂದ ಅನುಷ್ಠಾನಗೊಳಿಸಿದ ಅಭಿವೃದ್ಧಿ ಕಾಮಗಾರಿಗಳ ವಿವರ, ಹಣದ ವಿನಿಯೋಗ ಮತ್ತಿತರೆ ವಿವರಗಳನ್ನು ವಾರ್ಷಿಕ ಜಮಾಬಂಧಿಯಲ್ಲಿ ಸಾರ್ವಜನಿಕರ ಮುಂದೆ ಬಹಿರಂಗಪಡಿಸುವುದು..

10. ಕಾಮಗಾರಿಯ ಪ್ರಗತಿಯನ್ನು ವರ್ಕ್ ಸಾಫ್ಟ್‌ನಲ್ಲಿ ಅಳವಡಿಸುವುದು.

11. ಕ್ರಿಯಾ ಯೋಜನೆಯನ್ನು ರೂಪಿಸುವಾಗ ಕಾಮಗಾರಿಗಳಗೆ ಹಂಚಿಕೆ ಪುನರಾವರ್ತನೆಯಾಗದಂತೆ ಎಚ್ಚರಿಕೆ ವಹಿಸುವುದು.

12. ಕಾಮಗಾರಿ ಅನುಷ್ಠಾನ ಪೂರ್ವದಲ್ಲಿ ಸಂಬಂಧಿಸಿದ ಪ್ರಾಧಿಕಾರಗಳಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದುಕೊಳ್ಳುವುದು.

13. ನಗದು ಬಹುಮಾನದ ಪೂರ್ಣ ವಿನಿಯೋಗದ ಬಗ್ಗೆ ವಿನಿಯೋಗಿತಾ ಪತ್ರವನ್ನು ನಿಗಧಿತ ನಮೂನೆಯಲ್ಲಿ ತಯಾರಿಸಿ ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ವಿಭಾಗಕ್ಕೆ ಸಲ್ಲಿಸುವುದು.

14. ಕೈಗೆತ್ತಿಕೊಂಡ ಕಾಮಗಾರಿಯ ಹೆಸರು, ಸ್ಥಳ, ಅಂದಾಜು ಮೊತ್ತ, ಕಾಮಗಾರಿ ಪ್ರಾರಂಭಗೊಂಡ ದಿನಾಂಕ, ಕಾಮಗಾರಿ ಪೂರ್ಣಗೊಂಡ ದಿನಾಂಕ, ಕಾಮಗಾರಿ ಅನುಷ್ಠಾನದ ವಿವಿಧ ಹಂತದ ಛಾಯಾಚಿತ್ರಗಳು, ಮತ್ತು ಕಾಮಗಾರಿ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರಗಳನ್ನು ಒಳಗೊಂಡ ಪೂರ್ಣ ಮಾಹಿತಿಗಳನ್ನು ತಪ್ಪದೇ ಇಟ್ಟುಕೊಳ್ಳುವುದು.

15. ಹಣ ಬಳಕೆ ಪತ್ರದೊಂದಿಗೆ Non-Diversion of the Fund Certificate, Non-Duplication Certificate ಮತ್ತು Non-Embezzlement Certificate ಗಳನ್ನು ಸಲ್ಲಿಸುವುದನ್ನು ಕಡ್ಡಾಯಗೊಳಿಸಿದೆ.

16. ಬಿಡುಗಡೆಗೊಳಿಸಿದ ನಗದು ಬಹುಮಾನವನ್ನು ಸಂಘ ಸಂಸ್ಥೆಗಳಿಗೆ ಸಹಾಯ ಧನ, ಧಾರ್ಮಿಕ ಕಟ್ಟಡಗಳ ನಿರ್ಮಾಣ ಅಥವಾ ಧಾರ್ಮಿಕ ಕಾರ್ಯಗಳಿಗಾಗಿ ದೇಣಿಗೆ, ಪಂಚಾಯತಿಗಳ ಆವರ್ತಕ ವೆಚ್ಚಗಳು ಮತ್ತು ವಿದ್ಯಾರ್ಥಿ ವೇತನಗಳ ವಿತರಣೆಗಳಿಗೆ ಬಳಸುವುದನ್ನು ನಿಷೇಧಿಸಲಾಗಿದೆ.

17. ಬಿಡುಗಡೆಗೊಳಿಸಿದ ನಗದು ಬಹುಮಾನದಲ್ಲಿ ವ್ಯಕ್ತಿಗಳ ಜ್ಞಾಪಕಾರ್ಥವಾಗಿ ಪ್ರತಿಮೆಗಳನ್ನು ನಿರ್ಮಿಸುವುದನ್ನು ನಿಷೇಧಿಸಲಾಗಿದೆ.

18. ಬಿಡುಗಡೆಗೊಳಿಸಿದ ನಗದು ಬಹುಮಾನವನ್ನು ವಾಹನಗಳ ಸಾಧನಗಳ ಖರೀದಿಗೆ ಬಳಸುವುದನ್ನು ನಿಷೇಧಿಸಲಾಗಿದೆ.

19. ಬಿಡುಗಡೆಗೊಳಿಸಿದ ನಗದು ಬಹುಮಾನವನ್ನು ಪಂಚಾಯತಿ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳ ಉಪವೇಶನ ಶುಲ್ಕ, ಗೌರವಧನಗಳ ಪಾವತಿಗೆ ಬಳಸುವುದನ್ನು ನಿಷೇಧಿಸಲಾಗಿದೆ.

20. ಅಧ್ಯಯನದ ಹೆಸರಿನಲ್ಲಿ ಪ್ರವಾಸ ಕಾರ್ಯಕ್ರಮಗಳನ್ನು ಕೈಗೊಳ್ಳುವುದನ್ನು ನಿಷೇಧಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎಂ. ಲೀನಾ ನರೋನ್ಹ 9/7/13
(ಮಾರ್ಗರೇಟ್ ಲೀನಾ ನರೋನ್ಹ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

<u>ಇವರಿಗೆ:</u>

1. ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ರಾಜ್ಯದ ಎಲ್ಲಾ ಜಿಲ್ಲೆಗಳು.
3. ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ರಾಜ್ಯದ ಎಲ್ಲಾ ತಾಲ್ಲೂಕುಗಳು.
4. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು ( ಆಯಾ ತಾಲ್ಲೂಕಿನ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಆದೇಶದ ಪ್ರತಿಯನ್ನು ವಿತರಿಸುವುದು).
5. ಇಲಾಖಾ ವೆಬ್‌ಸೈಟ್ / ಕರ್ನಾಟಕ ವಿಕಾಸ ಮಾಸಪತ್ರಿಕೆ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ..ಅ.ಪಂ. ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ನಿರ್ದೇಶಕರು (ಪಂ. ರಾಜ್), ಗ್ರಾ..ಅ.ಪಂ. ರಾಜ್ ಇಲಾಖೆ, ಬೆಂಗಳೂರು ಇವರ ಆಪ್ತ ಸಹಾಯಕರು.